“ಹಾಂ. ಪತ್ತೆ ಆದ ಹಾಗೇನೆ! ಕುಮುದ ಅವರೆ, ನಾನು ಏನು ನಡೆಯಿತೆಂಬುದನ್ನು ಹೇಳಲೇ?” ಒಗಟಿನಂತೆ ಹೇಳಿ, ಕರಮಚಂದ ಕುರ್ಚಿಯಲ್ಲಿ ಆಸೀನನಾದ.

“ಗುರುವಾರ ರಾತ್ರಿ ಎಂಟರ ಹೊತ್ತಿಗೆ ಒಬ್ಬ ವ್ಯಕ್ತಿ ಆತನ ಹೋಟೆಲಿಗೆ ಬಂದ. ಗಡ್ಡಧಾರಿಯಾದ ಆತನ ಹೆಸರೇನು ಗೊತ್ತೇ? ನೀರುಗುಂಟಿ ಬಾಬು! ಆತನೊಬ್ಬ ಕ್ರಿಮಿನಲ್. ಆ ದಿವಸ ಮಡಿಕೇರಿ ಕಾರಾಗೃಹದಿಂದ ಜಾಮೀನಿನ ಮೇಲೆ ಬಿಡುಗಡೆ ಹೊಂದಿದವನು! ಅವನು ಜೈಲಿನಿಂದ ಹೊರಬರುತ್ತಿದ್ದಂತೆ ಇನ್ನಿಬ್ಬರು ಗೂಂಡಾಗಳು ಆತನ ಮುಗಿಸಲು ಕಾದು ಕುಳಿತಿದ್ದರು. ಅವೆಲ್ಲಾ ಗ್ಯಾಂಗ್ ವಾರ್. ಅದನ್ನು ಅರಿತಿದ್ದ ಬಾಬು, ಹೇಗೋ ಅವರ ಕಣ್ಣಿಗೆ ಮಣ್ಣೆರಚಿ, ಮಡಿಕೇರಿಯಿಂದ ಹೊರಬಿದ್ದ. ಅವರಿಬ್ಬರು ಆತನ ಬೆನ್ನು ಹತ್ತಿದರು. ಆತ ಗೋಣಿಕೊಪ್ಪಲಿಗೆ ಬರುವಾಗ ರಾತ್ರಿಯಾಗಿತ್ತು. ಅಲ್ಲಿ ಬೋಪಣ್ಣನ ಹೋಟೇಲಿಗೆ ನುಗ್ಗಿದ ಬಾಬು, ಆತನಲ್ಲಿ ಆಶ್ರಯ ಬೇಡಿದ. ಬಹುಶಃ ಹಣದ ಆಮಿಷ ಒಡ್ಡಿರಬಹುದು. ಬೋಪಣ್ಣ ಅದಕ್ಕೊಪ್ಪಿ, ಆತನನ್ನು ಕರೆದುಕೊಂಡು ಹೋಗಿ, ತನ್ನ ಕಾರಿನಲ್ಲಿ ಅಡಗಿಸಿಟ್ಟ. ಬೋಪಣ್ಣನ, ಹೋಟೆಲು ಬಳಿ ಪಾರ್ಕಿಂಗ್ ಇಲ್ಲವೆಂದು, ತುಸು ದೂರದಲ್ಲಿ ಕಾರು ನಿಲ್ಲಿಸುವ ಅಭ್ಯಾಸ ನೆರವಾಯಿತು. ನಂತರ ಬಂದ ಆ ಇಬ್ಬರು ಗೂಂಡಾಗಳು ಅನುಮಾನದಿಂದ ಬೋಪಣ್ಣನ ಹೋಟೆಲಲ್ಲಿ ಹುಡುಕಾಡಿದರು. ಅವರಿಗೆ ಯಾರೋ ಸುಳಿವು ನೀಡಿದ್ದಿರಲೂಬಹುದು. ಅಲ್ಲಿ ಬಾಬು ಕಾಣಲಿಲ್ಲ. ನಂತರ ಬೋಪಣ್ಣ ಕಾರಿನಲ್ಲಿ ಬಾಬುವನ್ನು ತನ್ನ ಮನೆಗೆ ಕರೆ ತಂದ. ಯಾರಿಗೂ ತಿಳಿಯಬಾರದೆಂದು ಬೋಪಣ್ಣ ಯಾವತ್ತಿನಂತೆ ಮನೆಯ ಹೊರಗಡೆಯ ದೀಪ ಹಾಕದೇ ಕತ್ತಲಲ್ಲೇ ಬಾಬುವನ್ನು ಒಳಗೆ ಕರೆದೊಯ್ದ. ಇದನ್ನು ತಿಮ್ಮರಾಜು ಕಂಡಿದ್ದಾನೆ. ಬಹುಶಃ ಮತ್ತೆ ಮಧ್ಯರಾತ್ರಿಯ ನಂತರ, ಬಾಬುವನ್ನು ಕರೆದುಕೊಂಡು ಬೋಪಣ್ಣ ಮತ್ತೆ ಹೋಟೆಲಿಗೆ ಹೋಗಿ, ಅಲ್ಲಿ ಬೇಕಾದಷ್ಟು ಹಣ್ಣು, ಬಿಸ್ಕತ್ತು, ನೀರು ಇತ್ಯಾದಿಗಳನ್ನು ತೆಗೆದುಕೊಂಡಿದ್ದಾನೆ. ಅಲ್ಲಿ ಬಾಗಿಲು ಮುರಿದಂತೆ ಮಾಡಿ, ಕಳ್ಳತನದ ಕತೆ ಸೃಷ್ಟಿಸಿದ್ದಾನೆ. ಅವನ್ನೆಲ್ಲಾ ತೆಗೆದುಕೊಂಡು, ಬಿಟ್ಟಂಗಾಲದ ಬಳಿ, ನಿರ್ಜನವಾದ ಜಾಗದಲ್ಲಿರುವ ಮನೆಯೊಂದಕ್ಕೆ ಕರೆದೊಯ್ದು, ಬಾಬುವನ್ನು ಅಲ್ಲಿರುವಂತೆ ಹೇಳಿದ್ದಾನೆ.”

“ನೀವು ಏನು ಹೇಳ್ತಾ ಇದ್ದೀರಿ? ಯಾವ ಮನೆಯದು?” ಕುಮುದ ಅಚ್ಚರಿಯಲ್ಲಿ ಕೇಳಿದಳು.

“ಅದು ಸುಬ್ರಮಣಿಯ ಮನೆ! ಬೋಪಣ್ಣ ಬಾಡಿಗೆಗೆ ತೆಗೆದುಕೊಂಡಿದ್ದ. ತನ್ನ ನೌಕರರಿಗೆ ಬೇಕಾಗುತ್ತೆಂದು ಬಾಡಿಗೆಗೆ ಪಡೆದಿದ್ದ ಅಂತ ಸುಬ್ರಮಣಿ ಹೇಳಿದ. ಆದರೆ ಬೋಪಣ್ಣ ಅದನ್ನು ಬಳಸುತ್ತಿದ್ದುದು ತನ್ನ ಅನೈತಿಕ ಕೆಲಸವೊಂದಕ್ಕೆ. ಆತನಿಗೆ ತನ್ನ ಹೋಟೇಲಿನ ಕೆಲಸದವಳೊಂದಿಗೆ ಅಕ್ರಮ ಸಂಬಂಧವಿತ್ತು. ಅದಕ್ಕೆ ಆ ಮನೆಯನ್ನು ಆತ ಬಳಸಿಕೊಳ್ಳುತ್ತಿದ್ದ.”

“ನೀವನ್ನುವುದೇನು?” ಕುಮುದ ಚೀರಿದಳು.

“ಅದು ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ.



ಬೋಪಣ್ಣನ ಪರ್ಸಿನಲ್ಲಿ ಒಂದು ಚೀಟಿ ಸಿಕ್ಕಿತು. ಅದರಲ್ಲಿ ಬಾಡಿಗೆ ಅಂತ ಬರೆದು, ಸಾವಿರದ ಇನ್ನೂರು, ಹತ್ತು ತಿಂಗಳಿಗೆ, ಹನ್ನೆರಡು ಸಾವಿರ ಅಂತ ಬರೆದು, ಪೇಯ್ಡ್ ಎಂದಿತ್ತು. ಅದಿಕ್ಕೇ ನಾನು ಹೊಟೇಲ್ ಬಾಡಿಗೆ ಎಷ್ಟು ಅಂತ ಕೇಳಿದ್ದು. ಹಾಗಿದ್ರೆ, ಬೋಪಣ್ಣನು ಸುಬ್ರಮಣಿಗೆ ಯಾವುದಕ್ಕೆ ಬಾಡಿಗೆ ಕೊಡ್ತಾ ಇದ್ದ? ಜೊತೆಗೆ, ಸುಬ್ರಮಣಿಗೆ ಚೆಕ್ ಕೊಟ್ಟಿದ್ದ. ಯಾಕೆ? ಸುಬ್ರಮಣಿಯಿಂದ ಚೆಕ್‌ನಲ್ಲಿ ಹಣ ತೆಗೆದುಕೊಂಡಿದ್ದು ಕಾಣಿಸಲಿಲ್ಲ. ಅಂದ್ರೆ, ನಗದು ತೆಗೆದುಕೊಂಡಿರಬೇಕು. ಯಾಕೆ? ಪ್ರಾಯಶಃ ಬೋಪಣ್ಣ ಅದನ್ನು ತನ್ನ ಅನೈತಿಕ ಸಂಬಂಧದ ಖರ್ಚಿಗೆ ಉಪಯೋಗಿಸಿರಬೇಕು. ಸುಬ್ರಮಣಿ ನಗದು ಕೊಟ್ಟಿದ್ದನ್ನು ಖಚಿತಪಡಿಸಿದ್ದಾನೆ.”

“ಹಾಗಿದ್ರೆ ಬಿಟ್ಟಂಗಾಲದ ಸನಿಹ ನಡೆದ ಶೂಟೌಟಿಗೂ, ಬಾಬುವಿಗೂ ಸಂಬಂಧವಿದೆಯಾ?” ನಾನು ಕೇಳಿದೆ.

“ಹೂಂ. ನಾನೇ ಆ ಬಗ್ಗೆ ಪೊಲೀಸರಿಗೆ ಸುಳಿವು ಕೊಟ್ಟವನು. ಸುಬ್ರಮಣಿ ನನ್ಗೆ ಆ ಮನೆಯ ವಿಳಾಸ ತಿಳಿಸಿದ. ನಾನು ಅಲ್ಲಿ ಹೋಗಿ ನೋಡಿದಾಗ, ವ್ಯಕ್ತಿಯೋರ್ವ ಇರುವುದು ಗೊತ್ತಾಯಿತು. ಮಡಿಕೇರಿ ಕಾರಾಗೃಹದಲ್ಲಿ ವಿಚಾರಿಸಿದಾಗ, ಆ ದಿವ್ಸ ಬಿಡುಗಡೆಯಾದವನು ಬಾಬು ಎನ್ನುವುದು ತಿಳಿಯಿತು. ಅವನ ಹಿಂದೆ ಯಾರೋ ಬಿದ್ದಿದ್ದಾರೆ ಎಂದು ಊಹಿಸಿ, ಪೊಲೀಸರನ್ನು ಎಚ್ಚರಿಸಿದೆ. ಆ ಗೂಂಡಾಗಳಿಗೆ ಬೋಪಣ್ಣನ ಮೇಲೆ ಅನುಮಾನವಿದ್ದುದರಿಂದ, ನಿಮ್ಮ ಮನೆಯ ಸುತ್ತ ಹೊಂಚು ಹಾಕುತ್ತಿದ್ದರು. ಇದನ್ನು ತಿಮ್ಮರಾಜು ನೋಡಿದ್ದಾನೆ. ನನ್ನ ಸೂಚನೆಯಂತೆ ಪೊಲೀಸರು ಸುಬ್ರಮಣಿಯ ಮನೆಯ ಹತ್ತಿರ ಅಡಗಿದ್ದರು. ಗೂಂಡಾಗಳು ಹೇಗೋ ಬಾಬುವಿನ ಸುಳಿವು ಹಿಡಿದು, ಮಧ್ಯಾಹ್ನ ಅಲ್ಲಿಗೆ ಬಂದಿರಬೇಕು. ಅದಕ್ಕೇ ಶೂಟೌಟ್ ನಡೆದಿದೆ. ಇಬ್ಬರೂ ಪೊಲೀಸರಿಗೆ ಬೇಕಾದ ಕ್ರಿಮಿನಲ್ಸ್. ಜೀವಂತವಾಗಿ ಸಿಕ್ಕಿ ಬಿದ್ದಿದ್ದಾರೆ. ಇನ್ನು ಬಾಬು ಅಡಗಿಕೊಂಡಿರಬೇಕಾಗಿಲ್ಲ.”

“ಅದು ಸರಿ. ಬೋಪಣ್ಣನವರು ಎಲ್ಲಿ?” ಕುಮುದ ಹತಾಶಳಾಗಿ ಕೇಳಿದಳು.

“ಬೋಪಣ್ಣನಿಗೆ ಶುಕ್ರವಾರ ಆ ಗೂಂಡಾಗಳು ತನ್ನ ಹಿಂದೆ ಬಿದ್ದಿರುವುದು ಗೊತ್ತಾಗಿದೆ. ಆಗ ಭಯವಾಗಿದೆ. ಅವರು ತನ್ನ ಮೇಲೆ ಆಕ್ರಮಣ ಮಾಡಿದರೆ, ಬಾಬು ಇರುವ ಜಾಗದ ಬಗ್ಗೆ ಹೇಳಬೇಕಾಬಹುದೆಂದು ಭೀತಿಗೊಂಡಿದ್ದಾನೆ. ತನ್ನ ಜೀವಕ್ಕೂ ಅಪಾಯವಿರಬಹುದೆಂದು ಮನವರಿಕೆಯಾಗಿದೆ. ಆಗ ಆತನೊಂದು ಯೋಜನೆ ಹಾಕ್ತಾನೆ. ನಾಪತ್ತೆಯಾಗುವುದು! ಹೋಟೆಲಲ್ಲಿ ಸಿಕ್ಕಿದ ಚೀಟಿಯಲ್ಲಿದ್ದ ಬರಹ ಕಂಡಾಗ ನನ್ಗೆ ಗೊತ್ತಾಗಿದೆ, ಇದು ಯಾರದ್ದೋ ಕೃತಕ ಕೈಬರಹ ಅಂತ. ಮತ್ತೆ ನಿಮ್ಮ ಮನೆಯಲ್ಲಿ ಮುರಿದ ನಿಬ್ಬಿನ ಪೆನ್ನು ಕಂಡಾಗ, ಖಚಿತವಾಯಿತು... ಆ ಬರಹವನ್ನು ಆ ಪೆನ್ನಿನಿಂದಲೇ ಬರೆಯಲಾಗಿದೆ ಅಂತ!”

“ಯಾಕೆ ಅನುಮಾನ ಬಂತು?” ನಾನು ಕೇಳಿದೆ.

“ಆ ಪೆನ್ನಿನಲ್ಲಿ ಶಾಯಿ ತುಂಬಿತ್ತು. ನಿಬ್ಬು ಮುರಿದಿದ್ದರೆ, ಶಾಯಿ ಯಾಕೆ ತುಂಬಿಸಿದ್ದಾರೆ? ಮೇಜಿನ ಮೇಲೆ ಶಾಯಿಯ ಗುರುತು ಇತ್ತು. ಅದು ಪೆನ್ನನ್ನು ಒತ್ತಿ, ನಿಬ್ಬು ಮುರಿದಾಗ ಮೂಡಿದ್ದು. ನಾವು ಈ ಕಡೆಯಲ್ಲಿ ಹುಡುಕಾಟ ನಡೆಸುವಾಗ, ಕುಮುದ ಪುಸ್ತಕ ಸರಿ ಮಾಡಿಡುವ ನೆಪದಲ್ಲಿ ಆ ಪೆನ್ನಿನ ನಿಬ್ಬು ಮುರಿದಳು. ಆ ಪೆನ್ನು ನೋಡಿದರೆ, ಆ ಬರಹವನ್ನು ಅದರಿಂದಲೇ ಬರೆದದ್ದು ಅಂತ ನಾನು ಊಹಿಸಬಹುದೆಂದು ಅದನ್ನು ಮುರಿದಳು!”

“ಸರಿಯೆಂದೇ ಇಟ್ಟುಕೊಳ್ಳುವ. ಬೋಪಣ್ಣ ಎಲ್ಲಿದ್ದಾರೆ?” ಕುಮುದ ತಿರಸ್ಕಾರದಿಂದ ಕೇಳಿದಳು.

“ಇಲ್ಲೇ! ಬೆಡ್ ರೂಮಿನ ಅಟ್ಟದ ಮೇಲೆ!!” ಕರಮಚಂದ ಹೇಳಿದಾಗ ಆಕೆಯ ಮೋರೆ ಬಿಳಿಚಿಕೊಂಡಿತು.

ಮತ್ತೆ ಕೆಲ ಕ್ಷಣಗಳಲ್ಲಿ ಆಕೆ ಬೋಪಣ್ಣನನ್ನು ಕರೆದಾಗ, ಆತ ಅಟ್ಟದಿಂದ ಇಳಿದು ಬಂದ.

“ಡಿಸೋಜ ತನಿಖೆಯ ಮಾಹಿತಿ ನೀಡಿದಾಗಲೇ ನನ್ಗೆ ಹೀಗಾಗಿರಬಹುದೆಂಬು ಅನುಮಾನ ಬಂತು. ನಿಮ್ಮ ಮನೆಗೆ ಬಂದಾಗ, ನೀವು ಹಚ್ಚುತ್ತಿರುವ ತರಕಾರಿ ಕಂಡು ನನಗದು ಖಚಿತವಾಯಿತು. ಯಾಕೆ ಗೊತ್ತೆ? ನೀವೂ ಅಷ್ಟೊಂದು ತರಕಾರಿ ಹಚ್ಚುತ್ತಾ ಇದ್ರೀ! ಒಬ್ಬರೇ ಇರೋದಾದ್ರೆ, ಅಷ್ಟು ತರಕಾರಿ ಯಾಕೆ? ಮಲಗುವ ಕೋಣೆಯ ಗೋಡೆಯಲ್ಲಿ ಕಂಡ ನೀಳವಾದ ರೇಖೆ... ಅದು ಚೆಲ್ಲಿದ ಕಾಫಿಯದ್ದು ಅಂತ ಊಹಿಸಿದೆ. ಗೋಡೆಯಲ್ಲಿ ಬೀಳೋದು ಹೇಗೆ? ಯಾರೋ ಮೇಲುಗಡೆ ಕುಳಿತು, ಕಾಫಿ ಕುಡಿದಿರಬೇಕು! ಕಿಟಕಿಗೆ ಹಾಕಿದ, ಗಾತ್ರ ಸರಿಯಿಲ್ಲದ, ಹೊಸ ಪರದೆಗಳು! ಯಾಕೆ? ಕಿಟಕಿಗೆ ಪಾರದರ್ಶಕವಲ್ಲದ ಗಾಜು ಇದ್ದರೂ, ಹೊಸ ಪರದೆ ಹಾಕಿದ್ದೇಕೆ? ಗಡಿಬಿಡಿಯಲ್ಲಿ ಅಂಗಡಿಯಿಂದ ಬೇರೆ ಅಳತೆಯ ಪರದೆ ತಂದಿದ್ದೇಕೆ? ಒಳಗಡೆ ಏನೂ ಕಾಣಬಾರದು ಎನ್ನುವ ಉದ್ದೇಶ. ಯಾಕೆ? ಪಕ್ಕನೆ ಬೋಪಣ್ಣ ಕೆಳಗೆ ಬಂದರೆ, ಯಾರ ಗಮನಕ್ಕೂ ಬರಬಾರದೆಂದು. ನೀರು ಕುಡಿಯಲೆಂದು ನಾನೇ ಅಡುಗೆ ಮನೆಗೆ ಹೋದೆ. ಅಲ್ಲಿ ಪಾತ್ರೆಯಲ್ಲಿ ಅನ್ನ ಬಹಳಷ್ಟು ಇತ್ತು. ಅಂದರೆ ಅಡುಗೆ ಇಬ್ಬರಿಗಾಗಿ ಆಗುತ್ತಿರುವುದು ಗೊತ್ತಾಯಿತು.”

ಬಾಬು ಒಂದು ಲಕ್ಷ ನಗದು ನೀಡಿದ್ದ ಅಂತ ಬೋಪಣ್ಣ ಒಪ್ಪಿಕೊಂಡ. ಆದರೆ ಈ ಗಲಾಟೆಯಲ್ಲಿ ಆತನ ಅನೈತಿಕ ಸಂಬಂಧ ಹೊರಬಿದ್ದು, ಅದು ಅವರ ಸಂಸಾರದ ಮೇಲೆ ಏನು ಪರಿಣಾಮ ಬೀರಿತು ಎನ್ನುವುದು ಮಾತ್ರ ಗೊತ್ತಾಗಲಿಲ್ಲ. ■